ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೨೯

ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣ ಮಂದಿರದ ಕೆಲಸ ಮುಂದುವರಿಯುತ್ತಿತ್ತು. ಇದಕ್ಕಾಗಿ ಧನಸಹಾಯ ಮಾಡಿದ್ದ ಮಿಸ್ ಹೆಲೆನ್ ರೂಬೆಲ್ (ಭಕ್ತಿ) ಹಾಗೂ ಮಿಸೆಸ್ ಅನ್ನಾ ವೊರ್ಸೆಸ್ಟರ್ (ಅನ್ನಪೂರ್ಣಾ) ಭಾರತಕ್ಕೆ ಬಂದಿದ್ದರು. ಇವರಿಬ್ಬರೂ ಅವೆರಿಕಾ ಸಂಯುಕ್ತ ಸಂಸ್ಥಾನದ ಪ್ರಾವಿಡೆನ್ಸ್‌ನಲ್ಲಿರುವ ವೇದಾಂತ ಕೇಂದ್ರದೊಂದಿಗೆ ಸಂಪರ್ಕ ಹೊಂದಿದ್ದವರು. ಆ ಕೇಂದ್ರದ ಅಧ್ಯಕ್ಷರಾದ ಸ್ವಾಮಿ ಅಖಿಲಾನಂದರೂ ಅನೇಕ ವರ್ಷಗಳ ನಂತರ ಭಾರತಕ್ಕೆ ಬಂದಿದ್ದರು. ಅಲ್ಲದೆ, ೫ ವರ್ಷಗಳಿಂದ ದಕ್ಷಿಣ ಅಮೆರಿಕಾದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದ ವಿಜಯಾನಂದರೂ ಸಹ ಕೆಲವು ದಿನಗಳ ಮಟ್ಟಿಗೆ ಭಾರತಕ್ಕೆ ಬಂದಿದ್ದರು. ಇವರೆಲ್ಲರನ್ನೂ ಭೇಟಿಯಾದ ವಿರಜಾನಂದರಿಗೆ ತುಂಬ ಆನಂದವಾಯಿತು.

ಸ್ವಾಮಿ ಅಖಿಲಾನಂದರು ಮತ್ತೆ ಅಮೆರಿಕೆಗೆ ಹಿಂದಿರುಗಿ, ಮರುವರ್ಷ ರಾಮಕೃಷ್ಣ ದೇವಾಲಯದ ಉದ್ಘಾಟನೆಯ ಸಮಯಕ್ಕೆ ಮತ್ತೆ ಭಾರತಕ್ಕೆ ಬರುವುದೆಂದು ತೀರ್ಮಾನಿಸಿದ್ದರು. ಈ ಬಾರಿ ಅವರು ತಮ್ಮ ಸಹಾಯಕ್ಕೆಂದು ಸ್ವಾಮಿ ಸತ್‌ಪ್ರಕಾಶಾನಂದರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದಿದ್ದರು. ಇವರಿಬ್ಬರನ್ನೂ ಬೀಳ್ಕೊಡಲು ಮಠದ ಸೋದರರು ಒಂದು ಸಭೆಯನ್ನು ಕರೆದು, ಅದಕ್ಕೆ ವಿರಜಾನಂದರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು.

ಶ್ರೀರಾಮಕೃಷ್ಣರ ಜನ್ಮ ಶತಮಾನೋತ್ಸವದ ಪ್ರಯುಕ್ತ ಇಡೀ ಭಾರತದಲ್ಲೇ ಅಲ್ಲದೆ ಭಾರತದ ಹೊರಗೂ ನಾನಾ ಸ್ಥಳಗಳಲ್ಲಿ ಉತ್ಸವಗಳು ಏರ್ಪಟ್ಟಿದ್ದವು. ೧೯೩೭ರ ಮಾರ್ಚ್ ತಿಂಗಳಲ್ಲಿ ಇದರ ಸಮಾರೋಪ ನಡೆಯುವುದಿತ್ತು. ಜಯಂತಿ ಕಮಿಟಿಯ ಪ್ರಧಾನ ಸಂಚಾಲಕರಾದ ಸ್ವಾಮಿ ಸಂಬುದ್ಧಾನಂದರು ಭಾರತದೆಲ್ಲೆಡೆ ಸಂಚರಿಸಿ, ಜಯಂತ್ಯುತ್ಸವಗಳು ವಿಧ್ಯುಕ್ತವಾಗಿ ಜರಗುವಂತೆ ಬಹಳ ಶ್ರಮಿಸಿದರು. ಈ ದೇಶವ್ಯಾಪೀ ಉತ್ಸವದ ಹಿಂದೆ ಸ್ವಾಮಿ ಸಂಬುದ್ಧಾನಂದರ ಅವಿರತ ಶ್ರಮ ಹಾಗೂ ಸೇವಾತತ್ಪರತೆಯು ಎಲ್ಲರನ್ನೂ ಚಕಿತಗೊಳಿಸಿತು.

ಶತಮಾನೋತ್ಸವದ ಅಂಗವಾಗಿ ೧೯೩೭ರ ಜನವರಿ ೩೧ರಂದು ಸರ್ವಧರ್ಮ ಸಮನ್ವಯವನ್ನು ಸೂಚಿಸುವ ಮಹಾ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಇದರಲ್ಲಿ ಜಾತಿ, ಧರ್ಮ ಇತ್ಯಾದಿಗಳ ಯಾವುದೇ ಪರಿಧಿಯನ್ನಿಟ್ಟುಕೊಳ್ಳದೆ ಹಿಂದೂ, ಮುಸಲ್ಮಾನ್, ಕ್ರಿಶ್ಚಿಯನ್, ಪಾರ್ಸಿ, ಜೈನ ಮುಂತಾದ ಮತ, ಸಂಪ್ರದಾಯಗಳ ಸ್ತ್ರೀ-ಪುರುಷರು ಪಾಲ್ಗೊಂಡಿದ್ದರು. ಈ ಮೆರವಣಿಗೆಯು ಅಪರಾಹ್ನ ೧.೩೦ಕ್ಕೆ ದೇಶಬಂಧು ಪಾರ್ಕ್‌ನಿಂದ ಪ್ರಾರಂಭಗೊಂಡು ರಾಜಾ ದೀನೇಂದ್ರ ಸ್ಟ್ರೀಟ್, ಆರ್.ಜಿ.ಕರ್. ರೋಡ್, ಕಾರ್ನ್‌ವಾಲೀಸ್ ಸ್ಟ್ರೀಟ್, ಕಾಲೇಜ್ ಸ್ಟ್ರೀಟ್, ಬಹುಬಜಾರ್ ಸ್ಟ್ರೀಟ್, ಚಿತ್ತರಂಜನ್ ಅವಿನ್ಯೂ ಹಾಗೂ ಬೆಂಟಿಂಗ್ ಸ್ಟ್ರೀಟನ್ನು ಬಳಸಿ ಬಂದು, ಸಂಜೆ ೪ ಗಂಟೆಯ ಹೊತ್ತಿಗೆ ಮೈದಾನದ ಮಾನ್ಯುಮೆಂಟಿಗೆ ಬಂದು ತಲುಪಿತು. ಅಲ್ಲಿ ನಡೆದ ಮಹಾಸಭೆಯಲ್ಲಿ ಅಧ್ಯಾಪಕರಾದ ವಿನಯ್ ಕುಮಾರ್ ಸರ್ಕಾರ್ ಮುಂತಾದವರು ಮಾತನಾಡಿದರು. ಬಹಳ ಇಚ್ಛೆಯಿದ್ದರೂ ಕಾರಣಾಂತರಗಳಿಂದ ಸ್ವಾಮಿ ವಿರಜಾನಂದರಿಗೆ ಈ ಮೆರವಣಿಗೆಯಲ್ಲಿ ಭಾಗವಹಿಸಲಾಗಲಿಲ್ಲ.

ದಕ್ಷಿಣ ಕೊಲ್ಕತ್ತೆಯ ಭವಾನಿಪುರದ ನಾರ್ದರ್ನ್ ಪಾರ್ಕ್‌ನಲ್ಲಿ ಶತಮಾನೋತ್ಸವದ ಅಂಗವಾಗಿ ಪ್ರದರ್ಶನವೊಂದನ್ನು

ಏರ್ಪಡಿಸಲಾಗಿತ್ತು (೧.೨.೧೯೩೭). ಇದು ಮುಖ್ಯವಾಗಿ ಭಾರತೀಯ ಧರ್ಮ, ಸಂಸ್ಕೃತಿ, ಚಿತ್ರಕಲೆ, ಕರಕುಶಲ ಕೈಗಾರಿಕೆ ಹಾಗೂ ಆರೋಗ್ಯದ ವಿಷಯಗಳನ್ನೊಳಗೊಂಡಿತ್ತು. ಕೊಲ್ಕತ್ತೆಯ ಮೇಯರ್ ಸರ್ ಹರಿಶಂಕರ್ ಪಾಲ್ ಒಟ್ಟಾರೆ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ನ್ಯಾಯಾಧೀಶರಾದ ದ್ವಾರಕಾನಾಥ ಮಿತ್ರರಿಂದ ಕಲಾವಿಭಾಗವೂ, ನರಸೀಪುರದ ರಾಜನಾದ ಭೂಪೇಂದ್ರ ನಾರಾಯಣ ಸಿಂಹರಿಂದ ಆರೋಗ್ಯ ವಿಭಾಗವೂ, ಡಾ. ಸತ್ಯ ಚರಣ ಲಾಹಾರಿಂದ ಸಂಸ್ಕೃತಿ ವಿಭಾಗವೂ ಹಾಗೂ ಸಂತೋಷದ ಮಹಾರಾಣಿ ಹೇಮಾಂಗಿನಿ ರಾಯ್ ಚೌಧುರಿಯವರಿಂದ ಮಹಿಳಾ ವಿಭಾಗವೂ ಉದ್ಘಾಟನೆ ಮಾಡಲ್ಪಟ್ಟಿತು. ಈ ಪ್ರದರ್ಶನವು ಒಂದು ತಿಂಗಳವರೆಗೂ ನಡೆದು ಸಹಸ್ರಾರು ಸಂಖ್ಯೆಯ ಜನರನ್ನು ಆಕರ್ಷಿಸಿತು. ಅದರಲ್ಲಿ ಭಾರತೀಯ ಸಂಸ್ಕೃತಿಯ ಇತಿಹಾಸದ ಕ್ರಮವಿಕಾಸವನ್ನು ವಿಶೇಷವಾಗಿ ಪ್ರದರ್ಶಿಸಿದ್ದರು.

ಶ್ರೀರಾಮಕೃಷ್ಣರ ಜನ್ಮ ಶತಮಾನೋತ್ಸವದ ಉತ್ಸವ-ಆನಂದಗಳು ನಡೆಯುತ್ತಿದ್ದಾಗ ಹಠಾತ್ತಾಗಿ ದುಃಖದ ಛಾಯೆಯು ಕಂಡಿತು. ೧೯೩೭ರ ಫೆಬ್ರವರಿ ೫ರಂದು ಮಠಾಧ್ಯಕ್ಷರಾದ ಸ್ವಾಮಿ ಅಖಂಡಾನಂದರು ಸಾರಗಾಛಿಯಲ್ಲಿತುಂಬ ಅಸ್ವಸ್ಥರಾಗಿದ್ದಾರೆಂಬ ಸುದ್ದಿ ಬಂತು. ತಕ್ಷಣವೇ ಕೆಲವು ಸಂನ್ಯಾಸಿಗಳು ಬೇಲೂರು ಮಠದಿಂದ ಸಾರಗಾಛಿಗೆ ಹೊರಟು, ಮಾರನೇ ದಿನವೇ ಅಖಂಡಾನಂದರನ್ನು ಬೇಲೂರು ಮಠಕ್ಕೆ ಕರೆದುಕೊಂಡು ಬಂದರು. ಆದರೆ ಮಹಾರಾಜರು ೧೪ ಗಂಟೆಗಳ ಕಾಲ ಮಾತ್ರ ಬದುಕಿದ್ದರು. ಫೆಬ್ರವರಿ ೭ ರ ಭಾನುವಾರದಂದು ಅಪರಾಹ್ನ ೩ ಗಂಟೆ, ೭ ನಿಮಿಷಕ್ಕೆ ಅವರು ಮಹಾಸಮಾಧಿಯಲ್ಲಿ ಲೀನರಾಗಿ ತಮ್ಮ ನಶ್ವರ ದೇಹವನ್ನು ತ್ಯಜಿಸಿದರು. ಅವರ ಮುಖಮಂಡಲದಲ್ಲಿ ರೋಗ-ವೇದನೆಗಳ ಚಿಹ್ನೆ ಕಿಂಚಿತ್ತಾದರೂ ಇರಲಿಲ್ಲ ; ಅಪೂರ್ವ ಶಾಂತಿ, ಆನಂದಗಳು ಅಲ್ಲಿ ನೆಲೆಸಿದ್ದವು. ಗುರುಭಾಯಿಗಳಾದ ಸ್ವಾಮಿ ಅಭೇದಾನಂದರು ಅಖಂಡಾನಂದರ ಅಂತಿಮ ದರ್ಶನಕ್ಕೆಂದು ಬೇಲೂರು ಮಠಕ್ಕೆ ಬಂದು, ಸ್ವತಃ ತಾವೇ ಪ್ರಿಯ ಸಹೋದರನ ದೇಹವನ್ನು ಪುಷ್ಪ-ಮಾಲೆಗಳಿಂದ ಅಲಂಕರಿಸಿದರು. ರಾತ್ರಿ ೮.೩೦ರ ಹೊತ್ತಿಗೆ ಮಠದ ಪ್ರಾಂಗಣದಲ್ಲಿ ಸ್ವಾಮಿ ಪ್ರೇಮಾನಂದರ ಸಮಾಧಿಸ್ಥಾನದ ಪಕ್ಕದಲ್ಲೇ ಅಖಂಡಾನಂದರ ತಪಸ್ಸಿನಿಂದ ಪವಿತ್ರವಾದ ಶರೀರವು ಶ್ರೀಗಂಧದ ಕಟ್ಟಿಗೆಯಿಂದ ಪ್ರಜ್ವಲಿತವಾದ ಚಿತಾಗ್ನಿಯಲ್ಲಿ ಆಹುತಿಯಾಯಿತು.

ಪೂಜ್ಯ ಅಖಂಡಾನಂದರ ತಿರೋಧಾನದ ನಂತರ ಪೂಜ್ಯರಾದ ಸ್ವಾಮಿ ವಿಜ್ಞಾನಾನಂದರು ಶ್ರೀರಾಮಕೃಷ್ಣ ಮಠ ಹಾಗೂ ಮಿಷನ್ನಿನ ಅಧ್ಯಕ್ಷರಾಗಿಯೂ ಹಾಗೂ ಸ್ವಾಮಿ ಶುದ್ಧಾನಂದರು ಉಪಾಧ್ಯಕ್ಷರಾಗಿಯೂ ನೇಮಕಗೊಂಡರು. ಆದ್ದರಿಂದ ವಿರಜಾನಂದರು ಸೆಕ್ರೆಟರಿಯಾಗಿ ಉಳಿದುಕೊಳ್ಳಬೇಕಾಯಿತು. ಶ್ರೀರಾಮಕೃಷ್ಣರ ಜನ್ಮ ಶತಮಾನೋತ್ಸವದ ಅಂಗವಾಗಿ ಮಾರ್ಚ್ ೧ರಿಂದ ೮ರವರೆಗೆ ಕೊಲ್ಕತ್ತಾದ ಟೌನ್ ಹಾಲ್‌ನಲ್ಲಿ 'ವಿಶ್ವಧರ್ಮ ಮಹಾಸಮ್ಮೇಳನ'ವು ಜರುಗಿತು. ಪ್ರಪಂಚದ ಎಲ್ಲ ಧರ್ಮಗಳ ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನವು ಅಭೂತಪೂರ್ವವಾಗಿತ್ತು. ಇದರ ಬಹುಪಾಲು ಖ್ಯಾತಿಯು ಅಧ್ಯಾಪಕರಾದ ವಿನಯ ಕುಮಾರ್ ಸರ್ಕಾರ್ ಅವರಿಗೆ ಸೇರಬೇಕಾದುದು. ಟೌನ್ ಹಾಲ್ ತಳಿರುತೋರಣ, ಪುಷ್ಪ-ಪತಾಕೆಗಳಿಂದ ಬಹಳ ಚೆನ್ನಾಗಿ ಅಲಂಕೃತವಾಗಿತ್ತು. ಅಲ್ಲಲ್ಲಿ ವಿಭಿನ್ನ ಸಂಪ್ರದಾಯದವರೆಲ್ಲರಿಗೂ ಅನ್ವಯಿಸುವಂತಹ ನುಡಿಗಟ್ಟುಗಳನ್ನೂ, ವಿವಿಧ ಧರ್ಮದ ಲಾಂಛನಗಳನ್ನೂ ತೂಗುಹಾಕಲಾಗಿತ್ತು. ಅಲ್ಲದೇ ವಿವಿಧ ಮಂದಿರಗಳ, ಮಠ-ತೀರ್ಥಸ್ಥಾನಗಳ ಚಿತ್ರಗಳು ಗೋಡೆಯನ್ನಲಂಕರಿಸಿದ್ದವು. ಭಾರತದ ಹಾಗೂ ವಿದೇಶಗಳ ಪ್ರಸಿದ್ಧ ವಿದ್ವಾಂಸರುಗಳು ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಬರಲಾಗದಿದ್ದ ಕೆಲವರು ತಮ್ಮ ತಮ್ಮ ಶುಭಹಾರೈಕೆಗಳನ್ನು ಕಳುಹಿಸಿದ್ದರು.[೧]

ಬೇರೆ ಬೇರೆ ಧರ್ಮದ ಪ್ರತಿನಿಧಿಗಳು ತಮ್ಮತಮ್ಮ ಧರ್ಮದ ಸಂಬಂಧವಾಗಿ ಭಾಷಣ ಮಾಡಿದರು. ಕೆಲವರು ಪ್ರಬಂಧಗಳನ್ನೋದಿದರು. ರಾಮಕೃಷ್ಣ ಸಂಘದ ಪರವಾಗಿ ಸ್ವಾಮಿ ವಿರಜಾನಂದರು ಕಳುಹಿಸಿದ ಸಂದೇಶವನ್ನು ಸ್ವಾಮಿ ನಿರ್ವೇದಾನಂದರು ಪ್ರಾರಂಭದ ಅಧಿವೇಶನದಲ್ಲಿ ಓದಿದರು. ಅದು ಹೀಗಿದೆ :

''ಈ ಮಹತ್ ಸಭೆಯಲ್ಲಿ ನೆರೆದಿರುವ ವಿವಿಧ ಧರ್ಮದ ಪ್ರತಿನಿಧಿಗಳ ದೃಶ್ಯವು ನಲ್ವತ್ತು ವರ್ಷಗಳಿಗೂ ಹಿಂದೆ ನಡೆದ ಐತಿಹಾಸಿಕ ಚಿಕಾಗೋ ಧರ್ಮ ಸಮ್ಮೇಳನವನ್ನು ನೆನಪಿಗೆ ತರು

---

೧ ಭಾರತದ ಆಗಿನ 'ಸೆಕ್ರೆಟರಿ ಆಫ್ ಸ್ಟೇಟ್' ಆಗಿದ್ದ ಲಾರ್ಡ್ ಜಿಟ್ ಲ್ಯಾಂಡ್ ರವರು ಅಧ್ಯಕ್ಷರಿಗೆ ಪತ್ರವೊಂದನ್ನು ಬರೆದಿದ್ದರು. ಅದರಲ್ಲಿ ಹೀಗಿತ್ತು: ''ನಿಮ್ಮ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ವಿಶ್ವಧರ್ಮ ಸಮ್ಮೇಳನದ ಸಾಫಲ್ಯವನ್ನು ಮನಸಾರೆ ಇಚ್ಛಿಸುತ್ತೇನೆ. ನಾನು ಬಂಗಾಳದಲ್ಲಿ ಇದ್ದಾಗ ರಾಮಕೃಷ್ಣ ಮಿಷನ್ನಿನ ಕಾರ್ಯಕರ್ತರು ಹಾಗೂ ಸಂನ್ಯಾಸಿಗಳೊಂದಿಗೆ ಬೆರೆಯುವಂತಹ ಅದೃಷ್ಟವನ್ನದಾಗಿತ್ತು. ಅದರ ನೆನಪು ಈಗಲೂ ನನ್ನ ಚಿತ್ತದಲ್ಲಿ ಹಸಿರಾಗಿಯೇ ಇದೆ. ರಾಮಕೃಷ್ಣ ಸಂಘದಿಂದ ಏರ್ಪಟ್ಟಿರುವ ಈ ಸಮ್ಮೇಳನವು ಸರ್ವತೋಭಾವದಲ್ಲಿ ಸಾರ್ಥಕತೆಯನ್ನು ಪಡೆಯುವುದು ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ....''

ಬಂಗಾಳದ ಗವರ್ನರ್ ಆಗಿದ್ದ ಸರ್ ಜಾನ್ ಆ್ಯಂಡರ್‌ಸನ್ ಶುಭಾಶಯಗಳನ್ನು ಕೋರುತ್ತ ಹೀಗೆಂದು ತಮ್ಮ ಸಂದೇಶವನ್ನು ಕಳುಹಿಸಿದ್ದರು: ''ಶ್ರೀರಾಮಕೃಷ್ಣರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲೆಂದು ಕೊಲ್ಕತ್ತೆಯಲ್ಲಿ ಈ ಮಹಾ ಸಮ್ಮೇಳನವು ಕರೆಯಲ್ಪಟ್ಟಿದೆ ಎಂಬುದನ್ನು ತಿಳಿದು ನನ್ನ ಮನದಲ್ಲಿ ಆಶಾಕಿರಣಗಳು ಉದಿಸಿವೆ. ಈ ಸಮ್ಮೇಳನದಲ್ಲಿ ಶ್ರೀರಾಮಕೃಷ್ಣರ ಆಂತರ್ಯದ ಭಾವನೆಗಳನ್ನು ಕುರಿತು ನೆರೆದಿರುವ ಪ್ರತಿನಿಧಿಗಳೊಂದಿಗೆ ಚರ್ಚಿಸಿದಲ್ಲಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಸಹಾಯವಾಗುವುದು. ಧರ್ಮಗಳ ಸಮನ್ವಯ, ಪರಮತ ಸಹಿಷ್ಣುತೆ ಹಾಗೂ ಅಂತರ್ಜಾತೀಯ ಮೈತ್ರಿ ಇವುಗಳೇ ಶ್ರೀರಾಮಕೃಷ್ಣರ ಆದರ್ಶ.''

ಮಹಾತ್ಮಾ ಗಾಂಧೀಜಿಯವರು ತಂತಿಯ ಮೂಲಕ ಈ ಸಂದೇಶವನ್ನು ಕಳುಹಿಸಿದ್ದರು: ''ಸಮ್ಮೇಳನದ ಸಾಫಲ್ಯಕ್ಕಾಗಿ ಪ್ರಾರ್ಥಿಸುತ್ತೇನೆ. ಈ ಸಮ್ಮೇಳನದ ಮೂಲಕ ಮಹಾನ್ ಕಾರ್ಯಸಿದ್ಧಿಯಾಗುವುದೆಂದು ನಂಬುವೆ.'' ಕಾಕಾ ಕಾಲೇಲ್ಕರ್ ಅವರಿಗೆ ಗಾಂಧೀಜಿ ಹೀಗೆ ಪತ್ರ ಬರೆದಿದ್ದರು: ''ಪ್ರೀತಿಯ ಕಾಕಾ, ತಾವು ವಿಶ್ವಧರ್ಮ ಮಹಾಸಮ್ಮೇಳನದಲ್ಲಿ ಭಾಗವಹಿಸಲು ಹೋಗುತ್ತಿದ್ದೀರಿ. ಈ ಸಮ್ಮೇಳನವು ಮಹಾಪುರುಷರಾದ ಶ್ರೀ ರಾಮಕೃಷ್ಣರಿಗೆ ಸಂಬಂಧಿಸಿದೆ. ಅಲ್ಲಿ ನಡೆಯುವ ಚರ್ಚೆಯು ಸರ್ವಧರ್ಮಾನುಯಾಯಿಗಳಿಗೆ ಮಾರ್ಗದರ್ಶನ ಮಾಡಲು ಸಮರ್ಥವಾಗಲೆಂಬುದೇ ನನ್ನ ಬಯಕೆ.''

ತ್ತಿದೆ. ಹಿಂದೂಧರ್ಮದ ಮಹಾನ್ ಪ್ರಚಾರಕರಾದ ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಾದ ಶ್ರೀರಾಮಕೃಷ್ಣರಿಂದ ಆಧ್ಯಾತ್ಮಿಕ ಉತ್ತರಾಧಿಕಾರ ರೂಪವಾಗಿ ಪಡೆದ 'ಸರ್ವಧರ್ಮ ಸಮನ್ವಯ' ಎಂಬ ಘೋಷಣೆಯನ್ನು ಈ ಸಮ್ಮೇಳನದಲ್ಲಿ ಮೊಳಗಿಸಿ ಇಡೀ ವಿಶ್ವವನ್ನೇ ಚಕಿತಗೊಳಿಸಿದರು. ಆ ಘೋಷಣೆಯನ್ನು ವಿಶ್ವದ ಮಾನವರು ಉತ್ಸಾಹ-ಆಗ್ರಹಗಳಿಂದ ಸ್ವೀಕರಿಸಿದ್ದರು. ಮಾನವರಲ್ಲಿ ಹೆಚ್ಚುತ್ತಿರುವ ಶಾಂತಿಪ್ರಿಯತೆ ಮತ್ತು ದಕ್ಷಿಣೇಶ್ವರದ ಮಹಿಮಾನ್ವಿತನು ತನ್ನ ಜೀವನದಲ್ಲಿ ಪ್ರತ್ಯಕ್ಷೀಕರಿಸಿಕೊಂಡ ಋಷಿ ಮುನಿಗಳ ಅತೀಂದ್ರಿಯ ಅನುಭೂತಿಗಳ ಬಗ್ಗೆ ಸಪ್ರೇಮ ಶ್ರದ್ಧೆಯೇ ಇದಕ್ಕೆ ಸಾಕ್ಷಿಯಾಗಿದೆ.

''ಈ ಸಂದೇಶದ ಘೋಷಣೆಯು ದೇಶದಿಂದ ದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ಪ್ರಸಾರವಾಗುತ್ತ ಹೋಯಿತು. ಅತ್ಯಲ್ಪ ಸಮಯದಲ್ಲೇ ಜಗತ್ತಿನ ಪ್ರಸಿದ್ಧ ಮಹಾನ್ ಚಿಂತಕರು ಈ ಸಂದೇಶದ ಮಹತ್ವವನ್ನು ಅರಿತು ಜಗತ್ತಿನ ಹಿತಕ್ಕಾಗಿ ಮುಕ್ತಿಯ ಗಾನವನ್ನು ಮತ್ತೆ ಹಾಡಲನುವಾಗಿದ್ದನ್ನು ಕಂಡು ನಮ್ಮ ಹೃದಯ ಆನಂದದಿಂದ ತುಂಬಿಹೋಗಿದೆ. ಅಲ್ಲದೇ ಪರಸ್ಪರ ಸಹಾನುಭೂತಿ ಹಾಗೂ ಧರ್ಮದ ಸಾಮಂಜಸ್ಯದ ಮೂಲಕ ಶಾಂತಿ ಮೈತ್ರಿಗಳಿಂದ ಕೂಡಿದ ಹೊಸ ಯುಗವೊಂದನ್ನು ಸೃಷ್ಟಿಸುವ ಉದ್ದೇಶದಿಂದ ಇಲ್ಲಿ ನೆರೆದಿದ್ದಾರೆ.

''ಜಡವಾದದ ಅಂಧಾನುಕರಣೆ ಮಾನವ ಜೀವನ ಮತ್ತು ಸಂಸ್ಕೃತಿಯ ತಳಹದಿಯನ್ನೇ ಅಲುಗಾಡಿಸಲು ಅನುವಾಗಿರುವ ಈ ಸಮಯದಲ್ಲಿ ವಿವಿಧ ಚಿಂತನಧಾರೆಯ ಸಮರ್ಥರು ತಮ್ಮ ತಮ್ಮೊಳಗೇ ವಿಚಾರ ವಿನಿಮಯ ಮಾಡಿಕೊಂಡು ತನ್ಮೂಲಕ ಪರಸ್ಪರ ಪ್ರೀತಿ ಹಾಗೂ ಭದ್ರಬುನಾದಿ ಹಾಕಿ, ಸರ್ವಮತ-ವಿಶ್ವಾಸಗಳ ಒಂದು ಭ್ರಾತೃಸಂಘವನ್ನು ಸ್ಥಾಪನೆ ಮಾಡಲೋಸುಗ ಈ ಧರ್ಮ ಸಮ್ಮೇಳನದಲ್ಲಿ ನೆರೆದಿರುವುದು ಈ ಯುಗದ ಮಂಗಳಕ್ಕೆ ನಾಂದಿ ಎಂಬುದರಲ್ಲಿ ಸಂದೇಹವಿಲ್ಲ. ಈ ಸಮ್ಮೇಳನವು ಸರ್ವತೋಮುಖವಾಗಿ ಸಾರ್ಥಕವಾಗಲಿ ಎಂಬುದೇ ನಮ್ಮೆಲ್ಲರ ಏಕೈಕ ಕಾಮನೆ. ಪ್ರಪಂಚದ ಬೇರೆ ಬೇರೆ ಪ್ರಾಂತ್ಯಗಳಿಂದ ಬಂದಿರುವ ಬೇರೆಬೇರೆ ಧರ್ಮದ ನೇತಾರರನ್ನು ಇಲ್ಲಿ ಯಾವೊಂದು ಸಖ್ಯ ಭಾವವು ಒಂದುಗೂಡಿಸಿದೆಯೋ ಅದು ನಮ್ಮೆಲ್ಲರನ್ನೂ ಒಂದು ಘನವಾದ ಭ್ರಾತೃತ್ವದ ಬಂಧನದಲ್ಲಿ ಕಟ್ಟಿಹಾಕುವುದು ಎಂಬುದು ನಮ್ಮ ದೃಢ ವಿಶ್ವಾಸವಾಗಿದೆ.

''ಈ ಪ್ರೇಮ-ತರಂಗವು ದಿನಗಳೆದಂತೆ ಅಪಾರ ಶಕ್ತಿ, ವ್ಯಾಪಕತೆಯನ್ನು ಪಡೆಯಲಿ. ವಿಶ್ವದಲ್ಲಿ ಈಗಿರುವ ಸಂಘರ್ಷ ಹಾಗೂ ದ್ವಂದ್ವದ ಅಪಸ್ವರವನ್ನು ಶಾಶ್ವತವಾಗಿ ನಿವಾರಿಸಲಿ ಎಂಬುದೇ ನಮ್ಮ ವ್ಯಾಕುಲ ಪ್ರಾರ್ಥನೆ.

''ಯಾರ ಹೆಸರಿನಲ್ಲಿ ಈ ಸಮ್ಮೇಳನವು ನಡೆಯುತ್ತಿದೆಯೋ ಆ ರಾಮಕೃಷ್ಣರು ನಮಗೆಲ್ಲರಿಗೂ ಅವರ ಸಂದೇಶದ ಮರ್ಮವನ್ನು ಅರಿಯುವಂತಹ ಶಕ್ತಿಯನ್ನು ನೀಡಲಿ. ಅಷ್ಟೇ ಅಲ್ಲದೆ ಅದರ ತತ್ತ್ವಜ್ಞಾನದ ಸಂಪತ್ತನ್ನು ಮನೆಮನೆಗೂ ತಲುಪಿಸಿ ಮಾನವ ಜನತೆಗೆ ಶಾಂತಿಯ ಅಡಿಗಲ್ಲನ್ನು ಹಾಕಲು ಬೇಕಾದ ಸಾಮರ್ಥ್ಯವನ್ನು ನೀಡಲಿ. ಅವರ ಆಶೀರ್ವಾದವು ನಿಮ್ಮಗಳ ಮೇಲೆ ಸದಾ ಸರ್ವದಾ ವರ್ಷಿತವಾಗಲಿ!''

ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ವತಿಯಿಂದ

ಸ್ವಾಮಿ ವಿರಜಾನಂದ

ಸೆಕ್ರೆಟರಿ

ಈ ಸಮ್ಮೇಳನದ ಪ್ರಾರಂಭಿಕ ಸಭೆಯು ಆಚಾರ್ಯರಾದ ವ್ರಜೇಂದ್ರನಾಥ ಸೀಲ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಮನ್ಮಥನಾಥ ಮುಖ್ಯೋಪಾಧ್ಯಾಯರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಸಮ್ಮೇಳನದ ಎರಡನೇ ಸಭೆಯು ಮಾರ್ಚ್ ೨ ರಂದು ಬೆಳಗ್ಗೆ ೮ ಗಂಟೆಗೆ ಪ್ರಾರಂಭವಾಯಿತು. ಕೊಲ್ಕತ್ತೆಯಲ್ಲಿ ಚೈನಾದ ಕೌನ್ಸೆಲ್ ಜನರಲ್ ಆದ ಸಿ. ಎಲ್. ಚನ್ ಎಂಬುವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು. ಅಂದು ಹೈದರಾಬಾದಿನ ನಿಜಾಮರಾದ ಬಹಾದೂರರ ಸಂದೇಶವನ್ನು ಸಭೆಯಲ್ಲಿ ಓದಲಾಯಿತು. ಅದರ ಒಂದಂಶ ಇಲ್ಲಿದೆ:

''ಯಾವ ಮಹಾಪುರುಷನು ತನ್ನ ನಿಜಜೀವನದಲ್ಲಿ ಉದಾರ ಉಚ್ಚತಮ ಸಮೂಹಗಳನ್ನು ಪ್ರತ್ಯಕ್ಷೀಕರಿಸಿಕೊಂಡು, ಸರ್ವ ಧರ್ಮ ಸಹಿಷ್ಣುತೆಯನ್ನು ಇಡೀ ಪ್ರಪಂಚಕ್ಕೆ ತೋರಿ ಹೋದನೋ ಯಾರ ಈ ಸಂದೇಶವನ್ನು ಧರ್ಮ ಸಮ್ಮೇಳನದಲ್ಲಿ ಪ್ರಚಾರ ಮಾಡಲು ತಾವುಗಳು ಪ್ರಯತ್ನಿಸುತ್ತಿರುವಿರೋ, ಅಂತಹ ಮಹಾಪುರುಷರ ಶತಮಾನೋತ್ಸವದ ಸಂದರ್ಭದಲ್ಲಿ ಶ್ರದ್ಧಾಪೂರ್ವಕವಾಗಿ ತಲೆಬಾಗಿ ನನ್ನ ಸಹ-ಅನುಭೂತಿಯನ್ನು ತಿಳಿಸುತ್ತ ಉತ್ಸಾಹದಿಂದ ಈ ಸಂದೇಶವನ್ನು ಕಳುಹಿಸುತ್ತಿರುವೆ....''

ಅದೇ ದಿನ ಸಂಜೆ ಸಮ್ಮೇಳನದ ೩ನೇ ಸಭೆ ಸ್ವಾಮಿ ಅಭೇದಾನಂದರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಪಾಶ್ಚಾತ್ಯ ಚಿಂತಕ ರೋಮಾ ರೋಲಾರ ಸಂದೇಶವನ್ನು ಓದಲಾಯಿತು :

''ಚಿಂತನೆಗಳ ಮೂಲಕ ನಾನು ನಿಮ್ಮೆಲ್ಲರೊಡನೆ ಯುಕ್ತವಾಗಿಯೇ ಇರುವೆ ಎಂಬುದರಲ್ಲಿ ಸಂದೇಹವಿಲ್ಲ. ಧರ್ಮ ಸಮ್ಮೇಳನದ ಬಗ್ಗೆ ನನಗಿರುವ ಸಹಭಾಗಿತ್ವವನ್ನೂ ನನ್ನ ಆಂತರಿಕ ಶುಭ ಕಾಮನೆಗಳನ್ನೂ, ಶ್ರದ್ಧಾಪೂರ್ವಕ ಅಭಿನಂದನೆಗಳನ್ನೂ ದಯವಿಟ್ಟು ಸರ್ವರಿಗೂ ತಿಳಿಯಪಡಿಸಿ. ಮಾನವನ ಜೀವನದಲ್ಲಿ ಪರಸ್ಪರ ಸೌಹಾರ್ದವನ್ನು ತರಲು ವಿವಿಧ ಧರ್ಮಗಳ ಸಾಮರಸ್ಯವನ್ನು ನಾನು ಜೀವನಪರ್ಯಂತ ಬಯಸುತ್ತಲೇ ಇದ್ದೆ. ಪ್ರೇಮಾವತಾರ ಶ್ರೀರಾಮಕೃಷ್ಣರ ಹೆಸರಿನಲ್ಲಿ ವಿಶ್ವಮೈತ್ರಿಯ ಪ್ರತೀಕವಾದ ಧರ್ಮ ಸಮ್ಮೇಳನವು ಸೇರುತ್ತಿರುವುದು ನನಗೆ ಅತ್ಯಂತ ಸಂತೋಷದ ಸಂಗತಿ. ಸಮ್ಮೇಳನದ ಪ್ರತಿನಿಧಿಗಳು ವಿಶ್ವ-ಮಾನವರ ಕಲ್ಯಾಣಕ್ಕಾಗಿ ಪ್ರಯತ್ನಿಸಬೇಕು ಎಂಬುದೇ ನನ್ನ ಕಳಕಳಿಯ ಮನವಿ. ಸಹಿಸಲಸಾಧ್ಯವಾದ ಕಿರುಕುಳ, ಖಂಡನೆ ಮತ್ತು ಅಪಮಾನಕ್ಕೊಳ

ಗಾದ ಶೋಷಿತರ ಅಭ್ಯುದಯಕ್ಕಾಗಿ ಈಗ ಬಹಳಷ್ಟು ಪ್ರಯತ್ನಗಳು ನಡೆಯುತ್ತಿವೆ. ನಾವೆಲ್ಲರೂ ಸಾಮಾಜಿಕ ನ್ಯಾಯದ ಸ್ಥಾಪನೆಗೆ ನೆರವಾಗುವಂತಾಗಲಿ. ಅಪಾರ ಪರಿಶ್ರಮದಿಂದ ದುಡಿದು ಕಣ್ಮರೆಯಾಗುವ ದರಿದ್ರರ, ನಿಸ್ಸಹಾಯಕರ ಸನಿಹದಲ್ಲೇ ನಮ್ಮ ಸ್ಥಾನವು ಸದಾ ಇರಲಿ.''

ಮಾರ್ಚ್ ೩ರಂದು ಬೆಳಗಿನ ಅಧಿವೇಶನವು ಕಾಕಾ ಕಾಲೇಲ್ಕರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಜೆಯ ಅಧಿವೇಶನವು ಕಾಲೇಜ್ ಸ್ಕ್ವೇರ್‌ನಲ್ಲಿರುವ ಯೂನಿವರ್ಸಿಟಿ ಇನ್ಸ್ಟಿಟ್ಯೂಟ್ ಹಾಲ್ ನಲ್ಲಿ ನಡೆಯಿತು; ಅಧ್ಯಕ್ಷರಾಗಿದ್ದವರು ವಿಶ್ವಕವಿ ರವೀಂದ್ರನಾಥ ಠಾಕೂರ್ ಅವರು.

ಮುಂದಿನ ಅಧಿವೇಶನಗಳಲ್ಲಿ ಅಧ್ಯಕ್ಷರಾದವರು ಇವರು:

ಮಾರ್ಚ್ ೪ ಬೆಳಿಗ್ಗೆ : ಸ್ವಾಮಿ ಪರಮಾನಂದರು
(ಇವರು ಬಾಸ್ಟನ್ ಹಾಗೂ ಲಾಕ್ರಿಸೆಂಟಾ ವೇದಾಂತ ಕೇಂದ್ರಗಳ ಅಧ್ಯಕ್ಷರಾಗಿದ್ದರು)
ಸಂಜೆ : ಸರ್ ಫ್ರಾನ್ಸಿಸ್ ಯಂಗ್ ಹಸ್ಬೆಂಡ್

ಮಾರ್ಚ್ ೫ ಬೆಳಿಗ್ಗೆ : ಪ್ರೊಫೆಸರ್ ಮೊಹಮ್ಮದ್ ಆಲಿ ಸಿರಾಜಿ
(ಇರಾನಿನ ಇವರು ಕೊಲ್ಕತ್ತೆಯ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್)
ಸಂಜೆ : ಡಾ. ಡಿ. ಆರ್. ಭಂಡಾರ್ಕರ್
(ಸಂಸ್ಕೃತ ಪಂಡಿತರು ಮತ್ತು ಭಾರತದ ಚರಿತ್ರೆ ಮತ್ತು ಸಂಸ್ಕೃತಿಯ ಪ್ರಾಧ್ಯಾಪಕರು)[೨]

ಮಾರ್ಚ್ ೬ ಬೆಳಿಗ್ಗೆ : ವಾರಾಣಸಿಯ ಹಿಂದೂ ವಿಶ್ವವಿದ್ಯಾಲಯದ ಪಂಡಿತ ಪ್ರಮಥನಾಥ ತರ್ಕಭೂಷಣ
ಸಂಜೆ : ಸಂಗೀತ ವಿದುಷಿಯೂ, ರಾಷ್ಟ್ರನಾಯಕಿಯೂ ಆದ ಶ್ರೀಮತಿ ಸರೋಜಿನಿ ನಾಯ್ಡು

ಮಾರ್ಚ್ ೭ ಬೆಳಿಗ್ಗೆ: ಅರ್ಜಂಟೀನಾದ ಮೇಡಮ್ ಗುಯ್ಯಾಡೆಸ್
ಸಂಜೆ : ವಾರಾಣಸಿಯ ಮಂಡಲೇಶ್ವರ ಸ್ವಾಮಿ ಭಾಗವತಾನಂದ ಗಿರಿ

ಮಾರ್ಚ್ ೮ ಬೆಳಿಗ್ಗೆ: ಕೊಲ್ಕತ್ತೆಯಲ್ಲಿ ಜೆಕೋಸ್ಲಾವಾಕಿಯಾದ ಕೌನ್ಸೆಲರ್ ಆದ ಡಾ. ಎಫ್. ವಿ. ಟೌಸೆಕ್
ಸಂಜೆ : ವಾರಾಣಸಿ ಹಿಂದೂ ವಿಶ್ವವಿದ್ಯಾನಿಲಯದ ಪ್ರೊ. ಎ. ಬಿ. ಧ್ರುವ.

ಶ್ರೀರಾಮಕೃಷ್ಣರ ವರ್ಷವ್ಯಾಪಿ ಶತಮಾನೋತ್ಸವಗಳು ಮಾರ್ಚ್ ೧೪ರಂದು ಶ್ರೀರಾಮಕೃಷ್ಣರ ಜಯಂತಿಯಂದು ಆರಂಭವಾಗಿ, ಎಂಟು ದಿನಗಳ ಕಾಲ ನಡೆದು ಸಮಾರೋಪಗೊಂಡವು. ಈ ಉತ್ಸವದಲ್ಲಿ ಬೊಂಬಾಯಿ, ಮದ್ರಾಸು, ಮೈಸೂರು, ಗುಜರಾತ್, ಪಂಜಾಬ್, ಉತ್ತರಪ್ರದೇಶ, ಬಿಹಾರ್, ಒಡಿಸ್ಸಾ, ಅಸ್ಸಾಂ ಹಾಗೂ ಬಂಗಾಳದ ವಿವಿಧ ಪ್ರಾಂತ್ಯಗಳಿಂದ ಅನೇಕ ಸಾಧು-ಸಂನ್ಯಾಸಿಗಳೂ, ಭಕ್ತರೂ ಬೇರೆ ಬೇರೆ ಸಂಪ್ರದಾಯದ ಪ್ರತಿಷ್ಠಿತ ಸ್ತ್ರೀ-ಪುರುಷರೂ ಭಾಗವಹಿಸಿದ್ದರು. ಮಠದ ಸೆಕ್ರೆಟರಿಯಾದ್ದರಿಂದ ವಿರಜಾನಂದರು ಎಲ್ಲ ಅತಿಥಿ-ಅಭ್ಯಾಗತರನ್ನು ನೋಡಿಕೊಳ್ಳುವುದರಲ್ಲಿ ನಿರತರಾಗಿದ್ದರೂ, ನಿಯಮಿತ ಜಪ-ಧ್ಯಾನವನ್ನು ಅತ್ಯಂತ ಶ್ರದ್ಧೆಯಿಂದ ಮುಂದುವರೆಸಿಕೊಂಡು ಹೋಗುತ್ತಿದ್ದರು. ಶ್ರೀರಾಮಕೃಷ್ಣರ ಜನ್ಮದಿನಕ್ಕೆ ಎರಡು ದಿನ ಮೊದಲು ಶಿವರಾತ್ರಿ ಯಂದು ರಾತ್ರಿ ೮ರಿಂದ ಹಿಡಿದು ಮಧ್ಯ ರಾತ್ರಿ ೧ ಗಂಟೆಯವರೆಗೆ ಏಕಾಸನದಲ್ಲಿ ಕುಳಿತು ಧ್ಯಾನಸ್ಥರಾಗಿದ್ದರು.

ಶತಮಾನೋತ್ಸವ ಸಮಾರೋಪದ ಮೊದಲು ಮತ್ತು ಅನಂತರ ಸಂಘದ ಸಂನ್ಯಾಸಿಗಳ ಸಭೆ ಸೇರಿತ್ತು. ಈ ಎರಡೂ ಸಭೆಗಳಲ್ಲಿ ವಿರಜಾನಂದರು ತಮ್ಮ ಸ್ವಲಿಖಿತ ಭಾಷಣಗಳನ್ನು ಓದಿದ್ದರು. ಇವುಗಳಿಂದ ಅವರ ಘನ ಆಲೋಚನಾ ಸಾಮರ್ಥ್ಯ, ವಿವೇಕಾನಂದರು ಹಾಕಿಕೊಟ್ಟ ಕರ್ಮಪಥದಲ್ಲಿ ಅವರಿಗೆ ಇದ್ದಂತಹ ದೃಢ ವಿಶ್ವಾಸ ಮತ್ತು ಬೆಳೆಯುತ್ತಿರುವ ಸಂಘದ ಬಗ್ಗೆ ಅವರಿಗೆ ಇದ್ದಂತಹ ಕಾಳಜಿಯು ಎದ್ದು ತೋರುತ್ತದೆ. ಮಾರ್ಚ್ ೧೦ರಂದು ಅವರು ನೀಡಿದ ಭಾಷಣದ ಒಂದಂಶವು ಹೀಗಿದೆ :

''ಪ್ರಭುವೇ ತನ್ನ ಕೆಲಸವನ್ನು ಮಾಡುತ್ತಿದ್ದಾನೆ ಮತ್ತು ಮುಂದೆಯೂ ಮಾಡಿಕೊಂಡು ಹೋಗುತ್ತಾನೆ. ಆದರೆ ಸಂಸಾರವನ್ನು ತ್ಯಜಿಸಿ ಬಂದು ಅವನ ಪತಾಕೆಯಡಿಯಲ್ಲಿ ನಿಂತು, ಅವನ ಕಾರ್ಯಕ್ಕೆ ಜೀವನವನ್ನೇ ಸಮರ್ಪಿಸಿಕೊಂಡಿರುವ ನಮ್ಮೆಲ್ಲರ ಆದ್ಯ ಕರ್ತವ್ಯವೇನೆಂದರೆ ಪ್ರಜ್ವಲಿಸುತ್ತಿರುವ ಈ ಆಧ್ಯಾತ್ಮಿಕ ಅಗ್ನಿಯಾವುದೇ ಕಾರಣಕ್ಕೆ ನಂದಿಹೋಗದಂತೆ ನೋಡಿಕೊಳ್ಳುವುದೇ ಆಗಿದೆ. ತ್ಯಾಗ ಮತ್ತು ಸೇವೆಯ ಮಹಾನ್ ಆದರ್ಶದ ಪಥದಲ್ಲಿ ನಾವು ಉಕ್ಕುವ ಉತ್ಸಾಹದಿಂದ ಮುಂದುವರಿಯಬೇಕಾಗಿದೆ. ನಾವು ದೀನ-ದುರ್ಬಲರೇ ಆಗಿರಬಹುದು. ಆದರೆ ಪ್ರಭುವು ಸರ್ವದಾ ನಮ್ಮ ಬೆನ್ನ ಹಿಂದೆಯೇ ಇದ್ದಾನೆ. ಆತನಲ್ಲಿ ವಿಶ್ವಾಸವಿರಿಸಿದರೆ ಆತನೇ ನಮಗೆ ಶಕ್ತಿ-ಸಾಮರ್ಥ್ಯಗಳನ್ನು ನೀಡುವನು. ಆದ್ದರಿಂದ ಹೇ ಭಗವಂತನ ಸೈನಿಕರೇ! ಹಿಂತಿರುಗಿ ನೋಡುವ ಅಗತ್ಯವಿಲ್ಲ; ಶರೀರ ಮತ್ತು ಅದರ ಸುಖದ ಬಗ್ಗೆ ಲೇಶಮಾತ್ರವೂ ಗಮನ ಕೊಡದೆ, ಅಷ್ಟೇ ಏಕೆ, ನಿಜಮುಕ್ತಿಯನ್ನೂ ಸಹ ಬದಿಗೊತ್ತಿ ಮುಂದೆ ನಡೆಯಿರಿ. ಮುಂದೆ ಯಾವುದಾದರೂ ಜನ್ಮದಲ್ಲಿ ಮುಕ್ತಿಗೆ ಪ್ರಯತ್ನಿಸೋಣ; ಆದರೆ ಈ ಜನ್ಮವು ಮೃತ್ಯುವಿಗಾಗಿ, ಹೆಚ್ಚೇನು, ಅಗತ್ಯಬಿದ್ದರೆ ನರಕಕ್ಕೆ ಹೋಗಲೂ ಸಹ ಸಿದ್ಧವಿದ್ದು, ಆತನ ಕೆಲಸಕ್ಕಾಗಿ ಈ ಜನ್ಮವನ್ನು ಮುಡಿಪಾಗಿಡಿ. ಹೀಗೆ ಮಾಡಲಾಗದಿದ್ದರೆ ಆತನ ಹೆಸರನ್ನು ಉಚ್ಚರಿಸಲೂ ಸಹ ನಾವು ಯೋಗ್ಯರಲ್ಲ. ಮಾನವನ ಇತಿಹಾಸದಲ್ಲೇ ಅಪೂರ್ವವಾದ ಒಂದು ಆಧ್ಯಾ

---

೨ ಈ ಅಧಿವೇಶನಕ್ಕೆ ಮದನ ಮೋಹನ ಮಾಳವೀಯರು ಅಧ್ಯಕ್ಷರಾಗಬೇಕಿತ್ತು. ಆದರೆ ದೈಹಿಕ ಅನಾರೋಗ್ಯದಿಂದಾಗಿ ಅವರಿಗೆ ಬರಲಾಗಲಿಲ್ಲ. ಆದ್ದರಿಂದ ಅವರು ಕಾಶಿಯಿಂದ ತಂತಿಯೊಂದನ್ನು ಕಳುಹಿಸಿದ್ದರು : ''... ಪರಮಹಂಸರ ಪುಣ್ಯಸ್ಮೃತಿಯ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ. ಮಾನಸಿಕವಾಗಿ ನಾನು ನಿಮ್ಮೊಂದಿಗಿದ್ದೇನೆ.''

ತ್ಮಿಕ ಚೇತನವನ್ನು ಜಾಗೃತಗೊಳಿಸಿ, ಭಾವವಿಪ್ಲವವನ್ನು ತರಲು ಶ್ರೀರಾಮಕೃಷ್ಣರು ಯಾರಿಗೆ ತಮ್ಮ ಸಕಲ ಶಕ್ತಿಯನ್ನೂ ಧಾರೆಯೆರೆದಿದ್ದರೋ, ಯಾರು ಶ್ರೀರಾಮಕೃಷ್ಣರ ಅಪರಮೂರ್ತಿಯೋ ಮತ್ತು ಆತ್ಮಸ್ವರೂಪರೋ ಅಂತಹ ಪೂಜ್ಯ ವಿವೇಕಾನಂದರಿಂದ ಸ್ಥಾಪಿತವಾದ ಸಂನ್ಯಾಸೀ ಸಂಘದ ಹೆಸರನ್ನು ಉಚ್ಚರಿಸಲೂ ಸಹ ನಾವು ಯೋಗ್ಯರಲ್ಲ.

''ನಮ್ಮ ಸಮಾಜದಲ್ಲಿ ಈಗಿರುವ ಅತಿದೊಡ್ಡ ಸಮಸ್ಯೆಯೆಂದರೆ ಅಸ್ಪೃಶ್ಯತೆ. 'ಮುಟ್ಟಬೇಡ, ಮುಟ್ಟಬೇಡ' ನೀತಿಯನ್ನೂ, ಧರ್ಮವನ್ನು ಅಡುಗೆ ಮನೆಗೆ ಸರಿಸಿರುವುದನ್ನೂ ಸ್ವಾಮೀಜಿಯವರು ತೀವ್ರವಾಗಿ ಖಂಡಿಸಿದ್ದಾರೆ. ಈ ದಿಕ್ಕಿನಲ್ಲಿ ನಾವು ಮಾಡುವುದು ಬಹಳಷ್ಟಿದೆ. ಇಲ್ಲಿ ನಾವು ನೆನಪಿನಲ್ಲಿಡಬೇಕಾಗಿರುವುದೇನೆಂದರೆ ಕೆಳಜಾತಿಯವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದು ಮತ್ತು ಉತ್ತಮ ಶಿಕ್ಷಣ ನೀಡುವುದು. ಆಗ ಮಾತ್ರವೇ ನಾವು ಈ ವಿಷಯಗಳಲ್ಲಿ ಅಮೂಲಾಗ್ರವಾಗಿ ಬದಲಾವಣೆಗಳನ್ನು ತರಬಹುದು. ಏಕೆಂದರೆ 'ಶಿಕ್ಷಣದ ಜಾದೂ ಸ್ಪರ್ಶದಿಂದ ಪರಿಹರಿಸಲಾಗದ ಯಾವುದೇ ಸಮಸ್ಯೆಯೂ ದೇಶದಲ್ಲಿಲ್ಲ' ಎಂದು ಸ್ವಾಮೀಜಿಯವರು ಹೇಳುತ್ತಿದ್ದುದು ತಿಳಿದೇ ಇದೆ.

''ಕೆಳವರ್ಗದ ಸೋದರರೊಂದಿಗೆ ನಾವು ನಾಯಿ ಬೆಕ್ಕುಗಳೊಂದಿಗೆ ವರ್ತಿಸುವುದಕ್ಕಿಂತ ಕೀಳಾಗಿ ವರ್ತಿಸುತ್ತಿರುವುದನ್ನು ಕಂಡು ಅವರಲ್ಲನೇಕರು ಹಿಂದೂಧರ್ಮವನ್ನು ಬಿಟ್ಟು ಹೋಗುತ್ತಿದ್ದಾರೆ. ಇದರಿಂದಾಗಿ ಹಿಂದೂ ಸಮಾಜವು ದಿನದಿಂದ ದಿನಕ್ಕೆ ದುರ್ಬಲವಾಗುತ್ತಿದೆ. ಹಿಂದೂಧರ್ಮವನ್ನು ಬಿಟ್ಟು ಬೇರೆ ಧರ್ಮಗಳಿಗೆ ಮತಾಂತರ ಹೊಂದುತ್ತಿರುವುದಕ್ಕೆ ಇರುವ ಮತ್ತೊಂದು ಕಾರಣವೆಂದರೆ, ಆರ್ಥಿಕ ಲಾಭ. ಜನರು ಧರ್ಮಕ್ಕಾಗಿ ಅಲ್ಲ; ಆರ್ಥಿಕ ಹಾಗೂ ಸಾಮಾಜಿಕ ಸೌಲಭ್ಯಗಳಿಗಾಗಿಯೇ ಪರಧರ್ಮವನ್ನವಲಂಬಿಸುತ್ತಿದ್ದಾರೆ ಎಂಬುದು ನಮ್ಮ ಸಮಾಜದ ಚಿಂತಾಜನಕ ಸ್ಥಿತಿಯನ್ನು ತೋರುತ್ತದೆ. ಹಿಂದೂಗಳು ಸುರಕ್ಷಿತರಾಗಿರಬೇಕಾದಲ್ಲಿ ಇವಕ್ಕೆಲ್ಲ ಇತಿಶ್ರೀ ಹಾಡಬೇಕಾಗಿದೆ. 'ಹಿಂದುವು ಇನ್ನೂ ಒಳ್ಳೆಯ ಹಿಂದುವಾಗಲಿ, ಮುಸಲ್ಮಾನನು ಇನ್ನೂ ಒಳ್ಳೆಯ ಮುಸಲ್ಮಾನನಾಗಲಿ, ಕ್ರೈಸ್ತನು ಇನ್ನೂ ಒಳ್ಳೆಯ ಕ್ರೈಸ್ತನಾಗಲಿ' ಎಂದು ಸ್ವಾಮೀಜಿಯವರು ಹೇಳಿದ್ದರೂ ಸಹ, ಧರ್ಮಾನುಷ್ಠಾನಕ್ಕಲ್ಲದೇ ಬೇರೆ ಉದ್ದೇಶಗಳಿಂದ ಸ್ವಧರ್ಮವನ್ನು ತ್ಯಜಿಸುವುದು ಅವರಿಗೆ ನೋವು ತರುತ್ತಿತ್ತು.

''ಜನಸಾಮಾನ್ಯರಲ್ಲಿ ಧರ್ಮ ಪ್ರಚಾರ ಮಾಡುವುದರ ಮೂಲಕ, ಹಿಂದೂ ಸಮಾಜದಲ್ಲಿ ಮತಾಂತರವನ್ನು ತಡೆಗಟ್ಟಬಹುದು. ಜನಸಾಧಾರಣರ ಮನಮುಟ್ಟುವಂತೆ ಉಪನ್ಯಾಸ ಮಾಡುವುದರಿಂದ, ಹರಿಕಥೆಗಳ ಮೂಲಕ ಸಮಾಜದಲ್ಲಿ ಧರ್ಮವನ್ನು ಹರಡಬಹುದಾಗಿದೆ. ಹಿಂದೆ ಸಮಾಜದಲ್ಲಿ ಧಾರ್ಮಿಕ-ಭಾವನೆಗಳನ್ನು ಯಾವುದು ಜಾಗೃತಗೊಳಿಸುತ್ತಿತ್ತೋ ಅಂತಹ ರಾಮಾಯಣ ಗಾಯನ, ಬಯಲಾಟ ಮುಂತಾದವುಗಳು ಪಾಶ್ಚಾತ್ಯ ಶಿಕ್ಷಣದ ಪರಿಣಾಮವಾಗಿ ಕಣ್ಮರೆಯಾಗುತ್ತಿರುವುದು ನಮ್ಮೆಲ್ಲರ ದೌರ್ಭಾಗ್ಯ. ಇವುಗಳಿಗೆಲ್ಲ ಹೆಚ್ಚು ಒತ್ತುಕೊಟ್ಟು ನವ ಚೇತನ ತುಂಬುವುದು ಅವಶ್ಯವಾಗಿದೆ. ಹೀಗೆ ಮಾಡುವುದರಿಂದ ಹಿಂದೂಧರ್ಮ ಪ್ರತಿಪಾದಿಸುವ ವಿಷಯಗಳಾವುವು ಎಂಬುದು ಜನ ಸಾಮಾನ್ಯರಿಗೆ ತಿಳಿಯುತ್ತದೆ.

''ಮಕ್ಕಳಿಗೆ ಧಾರ್ಮಿಕ ಶಿಕ್ಷಣ ನೀಡುವುದು ಅತ್ಯಗತ್ಯ. ಈಗಿನ ಕಾಲದ ಶಿಕ್ಷಣ ವಿಧಾನವು ಧರ್ಮದ ಬಗ್ಗೆ ದ್ವೇಷವನ್ನು ಹುಟ್ಟಿಸುತ್ತಿದೆ. ಧರ್ಮವಿಹೀನ ಶಿಕ್ಷಣವು ಶಿಕ್ಷಣವೇ ಅಲ್ಲ. ಆ ರೀತಿಯ ಶಿಕ್ಷಣದಿಂದ ಅವರು ವಿಶ್ವವಿದ್ಯಾಲಯಗಳ ಪದವಿಗಳನ್ನು ಪಡೆಯಬಹುದು. ಆದರೆ ದೇಶ ಹಾಗೂ ಸಮಾಜದ ಬಗ್ಗೆ ಕರ್ತವ್ಯಹೀನರಾಗುವ ಸಂಭವವೇ ಹೆಚ್ಚು.

''ಯಥಾರ್ಥವಾದ ಧರ್ಮಶಿಕ್ಷಣವನ್ನು ನೀಡಲು ಯಥಾರ್ಥವಾದ ಧಾರ್ಮಿಕ ಜೀವನವನ್ನು ನಡೆಸಿದವರೇ ಆಗಬೇಕು. ಏಕೆಂದರೆ ಅಂಥವರ ಜೀವನವೇ ಇತರರ ಜೀವನವನ್ನು ದೀಪ್ತಗೊಳಿಸಲು ಸಾಧ್ಯ. ಸದ್ಧಾರ್ಮಿಕ ವ್ಯಕ್ತಿಯು ಹೆಚ್ಚು ಮಾತನಾಡದೆಯೂ ಇತರರಿಗೆ ಧರ್ಮಪ್ರೇರಣೆಯನ್ನು ನೀಡಬಲ್ಲ. ಯಥಾರ್ಥ ಜೀವನದ ಅಭಾವವಿದ್ದಲ್ಲಿ ಧಾರ್ಮಿಕ ಶಿಕ್ಷಣ ನೀಡುವುದು ವ್ಯರ್ಥವೇ ಸರಿ. ಆದ್ದರಿಂದ ಈ ದಿಸೆಯಲ್ಲಿ ದುಡಿಯುತ್ತಿರುವ ನಮ್ಮ ಸೋದರರು ಮಕ್ಕಳಲ್ಲಿ ಧಾರ್ಮಿಕ ಭಾವನೆಯನ್ನು ಬಿತ್ತಲು ತಾವು ಅನುಸರಿಸಿ ಅವರಿಗೆ ಮಾದರಿಯಾಗಬೇಕೆಂಬುದೇ ನನ್ನ ಮನವಿ.''

ಸಂನ್ಯಾಸೀ ಸಮ್ಮೇಳನದ ಮತ್ತೊಂದು ಸಭೆಯಲ್ಲಿ (ಮಾರ್ಚ್ ೧೬) ನೀಡಿದ ಭಾಷಣದಲ್ಲಿ ವಿರಜಾನಂದರು ಈ ಕೆಳಗಿನ ವಿಷಯವನ್ನು ವಿಶದಪಡಿಸಿದರು :

''ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವವು ಇಡೀ ದೇಶದಲ್ಲೇ ಜರುಗಿದೆ, ಮತ್ತು ಈಗಲೂ ಜರುಗುತ್ತಿದೆ. ಶ್ರೀರಾಮಕೃಷ್ಣರ ಸಂದೇಶವು ದಶದಿಕ್ಕಿನಲ್ಲೂ ಪ್ರತಿಧ್ವನಿತವಾಗುತ್ತಿದೆ. ಈ ಉತ್ಸಾಹ ಹಾಗೂ ಉದ್ದೀಪನೆಯನ್ನು ತಣ್ಣಗಾಗಲು ಬಿಡದೇ ವ್ಯಕ್ತಿಗತವಾಗಿಯೂ ಸಮಗ್ರವಾಗಿಯೂ ಇದು ಜೀವಂತವಾಗಿರುವಂತೆ ಮಾಡಲು ಪ್ರಯತ್ನಿಸಬೇಕು.''

ಈ ಭಾಷಣದ ಮತ್ತೊಂದು ತುಣುಕು :

''ಸೋದರರೇ, ಶ್ರೀರಾಮಕೃಷ್ಣ ಶತಮಾನೋತ್ಸವದ ಪ್ರಭಾವವನ್ನು ನಾವು ಹಿಡಿದಿಡಲೇಬೇಕು. ನಮ್ಮ ಸಂಘದ ವಿವಿಧ ಕೇಂದ್ರಗಳಲ್ಲಿದ್ದು, ಜನಸೇವೆ, ಶಿಕ್ಷಣದ ಜೊತೆ ಧರ್ಮಪ್ರಚಾರ ಕೆಲಸವನ್ನು ಈ ವಿಶಾಲ ಮಹಾದೇಶದ ಎಲ್ಲೆಡೆಯಲ್ಲೂ ಹರಡಲು ನಾನಾ ಕೇಂದ್ರಗಳಲ್ಲಿ ವಿವಿಧ ಕೆಲಸಗಳಲ್ಲಿ ನಾವೆಲ್ಲ ನಿರತರಾಗಿದ್ದರೂ ಸಹ ನಮ್ಮ ಹೃದಯ ಮಿಡಿತ ಒಂದೇ. ಏಕೆಂದರೆ ನಾವೆಲ್ಲರೂ ಒಂದೇ ಆರಾಧ್ಯ ಆದರ್ಶವಾದ ಶ್ರೀರಾಮಕೃಷ್ಣ-ವಿವೇಕಾನಂದರ ಪಾದಪದ್ಮಗಳಲ್ಲಿ ಬಂಧಿತರಾಗಿದ್ದೇವೆ.''

(ಮುಂದುವರಿಯುವುದು)